ನೀವು ಸದನದಲ್ಲಿ ಪ್ರಶ್ನೆ ಕೇಳಿದ್ದೀರಿ, ಈಗ ಪಹಣಿ ಕೇಂದ್ರಗಳನ್ನು ದುರಸ್ತಿ ಮಾಡಿದ್ದಾರೆಂದು ಸಾರ್ವಜನಿಕರಿಂದ ಉತ್ತರ ಬಂದಿತು. ಅದಕ್ಕಾಗಿ ಸಿಂಧಗಿ ನಗರದಲ್ಲಿ ಪೊಲೀಸರ ಸರ್ಪಗಾವಲಿನಲ್ಲಿ ಪಹಣಿ ಪತ್ರಿಕೆಗಳನ್ನು ವಿತರಿಸುತ್ತಿರುವುದನ್ನು ದಯವಿಟ್ಟು ತಪ್ಪಿಸಬೇಕು. ಸಾರ್ವಜನಿಕರಿಗೆ ಪಹಣಿ ಪತ್ರಿಕೆಗಳು ಮುಕ್ತವಾಗಿ ಸಿಗಬೇಕೆಂದು ನನ್ನ ವಿನಂತಿಯಿದೆ. ಇದನ್ನು ತಪ್ಪಿಸುವ ಸಲುವಾಗಿ ಹೆಚ್ಚುವರಿ ಪಹಣಿ ಪತ್ರಿಕೆ ಕೇಂದ್ರಗಳನ್ನು ಮಾಡಬೇಕು.

ಶ್ರೀ ಕೃಷ್ಣ ಬೈರೇಗೌಡ (ಕೃಷಿ ರಾಜ್ಯ ಸಚಿವರು)(ಕಂದಾಯ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಉಪಕೇಂದ್ರವೊಂದನ್ನು ತೆಗೆದು ಅಲ್ಲಿಗೆ ಹಾಕಿರುವುದರಿಂದ ಪ್ರಸ್ತುತ ಅದು ಕಾರ್ಯನಿರ್ವಹಿಸುತ್ತಿದೆ. ಅಲ್ಲಿ ಯುಪಿಎಸ್ ಸಮಸ್ಯೆಯಾಗಿತ್ತು, ಅದನ್ನು ಸರಿಪಡಿಸಲಾಗಿದೆ. ಮುಂದುವರೆದು, ಈ ಭಾರಿ ನಾವು ಆಯವ್ಯಯದಲ್ಲಿ ಘೋಷಣೆ ಮಾಡಿದಂತೆ ಪಂಚಾಯಿತಿಗೆ ಒಂದು ಸಾಮಾನ್ಯ ಸೇವಾ ಕೇಂದ್ರ (Citizen Service Centre)ನ್ನು ಪ್ರತಿ ಪಂಚಾಯಿತಿಯಲ್ಲಿ ಮಾಡುತ್ತಿದ್ದೇವೆ. ಅದನ್ನು ಮಾಡಿದಾಗ ಬಹುತೇಕ ಈ ಸೇವೆಗಳು ಪಂಚಾಯಿತಿ ಮಟ್ಟದಲ್ಲಿಯೇ ಸಿಗುವುದರಿಂದ ಈ ಸಮಸ್ಯೆ ಬಹುತೇಕವಾಗಿ ಬಗೆಹರಿಯುವುದಕ್ಕೆ ಅವಕಾಶವಾಗುತ್ತದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಹರಿಜನ ಹಾಗೂ ಗಿರಿಜನ ಕಲ್ಯಾಣ ಯೋಜನೆ

160(2473); ಶ್ರೀ ಗುರು ಪಾಟೀಲ ಶಿರವಾಳ (ಶಹಾಪುರ)

ಅ) ಕಳೆದ ಮೂರು ವರ್ಷಗಳಲ್ಲಿ ಶಹಪುರ ಕ್ಷೇತ್ರದಲ್ಲಿ ಕೃಷ್ಣ ಭಾಗ್ಯ ಜಲ ನಿಗಮದಿಂದ ಹರಿಜನ ಹಾಗೂ ಗಿರಿಜನ ಕಲ್ಯಾಣ ಯೋಜನೆಯಲ್ಲಿ ಮಂಜೂರಾದ ಹಾಗೂ ಖರ್ಚಾದ ಹಣದ ಮೊತ್ತವೆಷ್ಟು; (ಕಾಮಗಾರಿಗಳು ಹಾಗೂ ಫಲಾನುಭವಿಗಳ ಪೂರ್ಣ ವಿವರ ನೀಡುವುದು)

ಆ) ಕಾಮಗಾರಿಗಳು ಯಾವ ಹಂತದಲ್ಲಿವೆ? (ವಿವರ ನೀಡುವುದು)

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲ ಸಂಪನ್ಮೂಲ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಕಳೆದ 3 ವರ್ಷಗಳಲ್ಲಿ ಶಹಪುರ ಮತಕ್ಷೇತ್ರದಲ್ಲಿ ವಿಶೇಷ ಘಟಕ ಯೋಜನೆ (ಎಸ್‌ಸಿಪಿ) ಹಾಗೂ ಗಿರಿಜನ ಉಪ ಯೋಜನೆ (ಟಿಎಸ್‌ಪಿ) ಯಡಿಯಲ್ಲಿ ಮಂಜೂರಾದ ಹಾಗೂ ವೆಚ್ಚದ ವಿವರಗಳು ಕೆಳಕಂಡಂತಿವೆ.

(₹ ಲಕ್ಷಗಳಲ್ಲಿ)

ವರ್ಷ	ಎಸ್‌ಸಿಪಿ ಯೋಜನೆಯಲ್ಲಿ ಮಂಜೂರಾದ ಮೊತ್ತ	ಖರ್ಚಾದ ಮೊತ್ತ	ಗಿರಿಜನ ಯೋಜನೆಯಡಿಯಲ್ಲಿ ಮಂಜೂರಾದ ಮೊತ್ತ	ಖರ್ಚಾದ ಮೊತ್ತ
2010–11	205.63	18.75	40.06	0.00
2011–12	477.19	26.34	41.60	2.40
2012–13	410.36	396.91	21.85	27.51

ಕಾಮಗಾರಿಗಳು ಹಾಗೂ ಫಲಾನುಭವಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಕೊಳವೆಬಾವಿ ಹಾಗೂ ತೆರೆದ ಬಾವಿ ಕಾಮಗಾರಿಗಳು ಪ್ರಗತಿಯಲ್ಲಿದೆ. ವಿದ್ಯುತ್ ಜೋಡಣೆ ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿವೆ. ನಾಲದಿಂದ ಪೈಪಲೈನ್ ಮುಖಾಂತರ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ರೈತರಿಗೆ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಕಾಲೋನಿಯಲ್ಲಿ ಸಿಸಿ ರಸ್ತೆ ನಿರ್ಮಿಸಿ ಸೌಲಭ್ಯ ಕಲ್ಪಿಸುವ ಕೆಲವು ಕಾಮಗಾರಿಗಳು ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿಗಳು ಪ್ರಗತಿಯಲ್ಲಿವೆ.

ಶ್ರೀ ಗುರು ಪಾಟೀಲ ಶಿರವಾಳ:– ಸನ್ಮಾನ್ಯ ಸಭಾಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಇದರಲ್ಲಿ ಏನಾಗಿದೆಯೆಂದರೆ 2010–11ರಲ್ಲಿ ಎಸ್‌ಸಿಪಿ ಯೋಜನೆಯಡಿಯಲ್ಲಿ ₹ 205.63 ಲಕ್ಷಗಳು ಮತ್ತು 2011–12ರಲ್ಲಿ ₹ 477.19ಲಕ್ಷ ಮಂಜೂರಾತಿಯನ್ನು ಕೊಟ್ಟಿರುವ ಪೈಕಿ ಖರ್ಚಾಗಿರುವ

ಮೊತ್ತ 2010–11ನೇ ಸಾಲಿನಲ್ಲಿ ₹ 18.75 ಲಕ್ಷಗಳು ಮತ್ತು 2011–12ನೇ ಸಾಲಿನಲ್ಲಿ ₹ 26.34 ಲಕ್ಷಗಳು ಮಾತ್ರ. ಈ ಎರಡು ವರ್ಷಗಳಲ್ಲಿ ಬಹಳ ಕಡಿಮೆ ಮೊತ್ತ ಖರ್ಚಾಗಿದೆ. ಅದೇ ರೀತಿ ಟಿಎಸ್‌ಪಿ ಯೋಜನೆಯಡಿ 2010–11ನೇ ಸಾಲಿನಲ್ಲಿ ₹ 40.00 ಲಕ್ಷಗಳು ಮಂಜೂರಾಗಿದ್ದರೆ ಆ ಸಾಲಿನಲ್ಲಿ ಏನೂ ಖರ್ಚಾಗಿಲ್ಲ. 2012–13ನೇ ಸಾಲಿನಲ್ಲಿ ಎಸ್.ಸಿ.ಪಿ. ಯೋಜನೆಯಡಿ ₹ 410.36ಲಕ್ಷಗಳು ಮಂಜೂರಾಗಿದ್ದರೆ ₹ 396.91ಲಕ್ಷಗಳು ಖರ್ಚಾಗಿದೆ. ನಾನು ಖುದ್ದಾಗಿ ಎಲ್ಲಾ ಕಾಮಗಾರಿಗಳನ್ನು ವೀಕ್ಷಣೆ ಮಾಡಿದ್ದೇನೆ.

ಅಧ್ಯಕ್ಷರು:– ನಿಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಗುರು ಪಾಟೀಲ್ ಶಿರವಾಳ:– ಸಾಕಷ್ಟು ಕಳಪೆ ಮಟ್ಟದ ಕಾಮಗಾರಿಗಳಾಗಿದೆ. ಇದರ ಬಗ್ಗೆ ಸಮಗ್ರವಾದಂಥ ತನಿಖೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಅವರು ಕೇಳಿದಂಥ ಪ್ರಶ್ನೆ ಬೇರೆ ಇದೆ. ಅವರು Statistical information ಕೇಳಿದ್ದರು, ಯಾವ್ಯಾವ ಬಾಬ್ತಿನಲ್ಲಿ ಖರ್ಚಾಗಿದೆ ಎಂದು ಕೇಳಿದ್ದಾರೆ. ಮೂಲಭೂತವಾಗಿ ಉತ್ತರವನ್ನು ತಾವು ಗಮನಿಸಿದರೆ, ಈ ಎಲ್ಲಾ ಯೋಜನೆಗಳು ಕಿರು ನೀರಾವರಿ ಯೋಜನೆಗಳಾಗಿವೆ. ಈ ಕಿರು ನೀರಾವರಿ ಯೋಜನೆಯಲ್ಲಿ ವಿದ್ಯುತ್ ಸಂಪರ್ಕ ನೀಡುವುದು ತಡವಾಗುತ್ತಿರುವದರಿಂದ ಬಹಳಷ್ಟು ಖರ್ಚಾಗಿಲ್ಲ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ. ಉಳಿದ ಕೆಲಸಗಳು ಯಾವ ಯಾವ ಹಂತದಲ್ಲಿವೆ ಎನ್ನುವ ವಿವರಗಳನ್ನು ಪೂರ್ಣವಾಗಿ ಒದಗಿಸಿದ್ದೇನೆ. ಯೋಜನೆಯ ಫಲಾನುಭವಿಗಳ ಲಿಸ್ಟ್ ಸಹ ಅವರಿಗೆ ತಲುಪಿದೆ. ಮುಂದೆ ಕಳಪೆ ಕಾಮಗಾರಿಯಾಗಿದೆ ಎಂದು ಹೊಸದಾಗಿ ಪ್ರಸ್ತಾಪ ಮಾಡಿದ್ದಾರೆ. ಪರಿಶೀಲಿಸಿ, ಏನು ಕಳಪೆ ಕಾಮಗಾರಿಯಾಗಿದೆಯೋ ಅದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು:– ಶ್ರೀ ರವೀಂದ್ರ ಎಂ.ಪಿ.ರವರ ಪ್ರಶ್ನೆ ಸಂಖ್ಯೆ.2458ಕ್ಕೆ ಸಂಬಂಧಿಸಿದಂತೆ ಕಾಲಾವಕಾಶ ಕೋರಿದ್ದಾರೆ.

ಕೋಳೂರು ಗ್ರಾಮದ ಈಶ್ವರ ದೇವಸ್ಥಾನದ ಕುರಿತು

162(2635); ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಅ) ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ಮತಕ್ಷೇತ್ರದ ಕೋಳೂರು ಗ್ರಾಮದ ಈಶ್ವರ ದೇವಸ್ಥಾನವು ಪ್ರಾಚೀನ ಕಾಲದ "ಕೋಳೂರು ಕೊಡಗೂಸು" ಎಂಬ ಐತಿಹಾಸ ಇರುವ ದೇವಸ್ಥಾನವು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸಂರಕ್ಷಿಸುವ ಕಾಮಗಾರಿಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಎಂದಿನಿಂದ ಈ ಕಾಮಗಾರಿಯನ್ನು ಕೈಗೊಳ್ಳುವುದು; (ಸಂಪೂರ್ಣ ಮಾಹಿತಿ ನೀಡುವುದು)?

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಮಾನ್ಯ ಸಣ್ಣ ಕೈಗಾರಿಕೆ, ಸಕ್ಕರೆ ಮತ್ತು ಮುಜರಾಯಿ ಸಚಿವರು)

ಅ) ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ಮತಕ್ಷೇತ್ರದ ಕೊಳೂರು ಗ್ರಾಮದ ಈಶ್ವರ ದೇವಸ್ಥಾನವು ದುಸ್ಥಿತಿಯಲ್ಲಿರುವುದು ಜಿಲ್ಲಾಧಿಕಾರಿಗಳ ವರದಿಯಿಂದ ತಿಳಿದು ಬಂದಿದೆ.

ಆದರೆ ಸದರಿ ಈಶ್ವರ ದೇವಸ್ಥಾನವು ಖಾಸಗಿ ದೇವಾಲಯವಾಗಿದ್ದು, ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲ.

ಆ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.